ಕನ್ನಡ ನಾಡಿನಿಂದ ದೂರದಲ್ಲಿರುವ ದೆಹಲಿಯಲ್ಲಿ ವಾಸವಾಗಿದ್ದರೂ ಕನ್ನಡದ ಕಂಪನ್ನು ಸದಾ ಉಸಿರಾಡುತ್ತಿರುವ ರೇಣುಕಾ ನಿಡಗುಂದಿ ಮೂಲತಃ ಧಾರವಾಡದವರು. ದೆಹಲಿ ಕರ್ನಾಟಕ ಸಂಘದ ಮುಖವಾಣಿ 'ಅಭಿಮತ'ದ ಸಂಪಾದಕ ಬಳಗದಲ್ಲಿ ಸಕ್ರಿಯರು.'ಕಣ್ಣ ಕಣಿವೆ', 'ದಿಲ್ಲಿ ಡೈರಿಯ ಪುಟಗಳು 2014', 'ಅಮೃತ ನೆನಪುಗಳು','ನಮ್ಮಿಬ್ಬರ ನಡುವೆ' ಅವರು ಬರೆದ ಪ್ರಮುಖ ಕೃತಿಗಳು.

ಜನರು ಕರೆಯದೇ ಬಂದವರೆಂತಲೂ ಮತ್ತು ಗೆಳೆಯರ ಮಾತು ಕೇಳಿ ನಿನ್ನನ್ನು ನೋಡುವುದಕ್ಕಾಗಿಯೇ ಬಂದಿರಬಹುದೆಂದು ಅವನು ಅವಳ ಕಿವಿಯಲ್ಲಿ ಪಿಸುಗುಟ್ಟಿದಾಗ ಮಾತ್ರ ಅವಳು ಸ್ವಲ್ಪ ವಿಚಲಿತಳಾದಳು. ಪುನಃ ಅವನು ಗ್ಲಾಸುಗಳನ್ನು ತೊಳೆದು ತರಲು ಹೇಳಿದಾಗ ಸಾವರಿಸಿಕೊಂಡಳು.

ಭೋಜನಕೂಟ ರಂಗೇರಿತು... ನಿಧಾನಕ್ಕೆ ಏರಿದ ಬಣ್ಣವೂ ಕರಗತೊಡಗಿತು. ಸುಮಾರು ಮಧ್ಯರಾತ್ರಿಯ ಹೊತ್ತಿಗೆ ಎಲ್ಲ ಅತಿಥಿಗಳೂ ಹೋಗಿಯಾಗಿತ್ತು. ಮಲಗುವ ಕೋಣೆಗೆ ಹೋಗಿ ತನ್ನ ಸೂಟ್‌ಕೇಸಿನಿಂದ ರಾತ್ರಿಯುಡುಪುಗಳನ್ನು ತೆಗೆದು ಉಡುವಾಗ ಅವಳಿಗೆ ತೀವ್ರವಾಗಿ ಅನಿಸಿತು - ರಸ್ತೆಯಲ್ಲಿ ತಾವಿಬ್ಬರೂ ಕಲ್ಪಿಸಿಕೊಂಡ ಮಾಯದ ಮನೆ ಈಗೆಲ್ಲೂ ಇಲ್ಲ!

ಈ ಮಾಯದ ಮನೆಯನ್ನು ಅವಳು ಅನೇಕ ಬಾರಿ ಕಂಡಿದ್ದಳು. ಕಟ್ಟಿದ್ದನ್ನೂ ಮತ್ತು ಮುರಿದುಬಿದ್ದಿದ್ದನ್ನೂ. ಆದ್ದರಿಂದ ಅವಳಿಗೆ ಇದೇನೂ ಘಾಸಿಗೊಳಿಸಲಿಲ್ಲ. ದಣಿವಿನಿಂದ ದಿಂಬಿಗೊರಗಿ ಯೋಚಿಸತೊಡಗಿದಳು.

ಯಾವಾಗಿನ ಮಾತಿದು? ಬಹುಶಃ ಇಪ್ಪತ್ತೈದು ವರುಷಗಳಾದವೆಂದು ತೋರುತ್ತದೆ. ಇಲ್ಲ ಮೂವತ್ತೋ. ಆಗ ಮೊದಲ ಬಾರಿಗೆ ಅವರು ಬದುಕಿನ ಹಾದಿಯಲ್ಲಿ ಸಿಕ್ಕಿದ್ದರು. ಅವಳು ಯಾವ ರಸ್ತೆಯಿಂದ ಬಂದಳು, ಅವನು ಯಾವ ಹಾದಿಯಿಂದ ಬಂದ ಎಂದು ಕೇಳುವುದನ್ನೂ, ಹೇಳುವುದನ್ನೂ ಸಹ ಮರೆತಿದ್ದರು. ನೆಲದಲ್ಲಿಯೇ ನೋಟ ನೆಟ್ಟು ಅವರು ಭೂಮಿಯಲ್ಲಿ ಪಾಯ ಹಾಕತೊಡಗಿದರು ಮತ್ತು ಅವರ ಮಾಯದ ಮನೆ ಬೆಳೆದು ತಲೆಯೆತ್ತಿ ನಿಂತಿತು. ಅವರಿಬ್ಬರೂ ಆ ಮನೆಯಲ್ಲಿ ನೆಮ್ಮದಿಯಾಗಿ ಇರತೊಡಗಿದ್ದರು.

ಮತ್ತೆ ಅವರಿಬ್ಬರ ಹಾದಿಗಳೂ ಅವರನ್ನು ಕೂಗಿ ಕರೆದಾಗ ಅವರಿಬ್ಬರೂ ತಮ್ಮ ತಮ್ಮ ಹಾದಿಯಲ್ಲಿ ಹೋಗುತ್ತಿದ್ದವರು ಬೆಚ್ಚಿ ನಿಂತರು. ನೋಡಿದರೆ ಅವರಿಬ್ಬರ ಹಾದಿಯ ನಟ್ಟನಡುವೆ ದೊಡ್ಡ ಕಣಿವೆ ಬಾಯ್ದೆರೆದು ನಿಂತಿತ್ತು. ಅವನು ಎಷ್ಟೋ ಹೊತ್ತು ಆ ಕಣಿವೆಯನ್ನೇ ನೋಡುತ್ತಿದ್ದ – 'ನೀನು ಈ ಕಣಿವೆಯನ್ನು ಹೇಗೆ ದಾಟಿ ಬರುತ್ತೀ?' ಎಂದು ಅವಳನ್ನು ಕೇಳುತ್ತಿರುವವನಂತೆ.

ಅವಳು ಉತ್ತರಿಸಲಿಲ್ಲ. 'ನೀನು ಕೈಹಿಡಿದು ದಾಟಿಸು, ನಾನು ಈ ಜಾತಿಮತದ ಕಣಿವೆಯನ್ನು ದಾಟಿ ಬರುವೆ' ಎನ್ನುತ್ತಿರುವಂತೆ ಅವಳು ಅವನ ಕೈಗಳತ್ತಲೇ ನೋಡುತ್ತಿದ್ದಳು.

ಮತ್ತೆ ಅವನ ಲಕ್ಷ್ಯ ಮೇಲೆ ಅವಳ ಕೈಗಳತ್ತ ಹೊರಳಿತು. ಅವಳ ಕೋಮಲವಾದ ಬೆರಳುಗಳಲ್ಲಿ ವಜ್ರದುಂಗುರ ಹೊಳೆಯುತ್ತಿತ್ತು. 'ನಿನ್ನ ಬೆರಳಿಗೆ ಕಟ್ಟುಪಾಡುಗಳ ದಾರ ಸುತ್ತಿಕೊಂಡಿದೆ, ಏನು ಮಾಡಲಿ ನಾನಿದನ್ನು?' ಎಂದು ಅವನು ಕೇಳುತ್ತಿರುವವನಂತೆ ಅವನು ಬಹಳ ಹೊತ್ತು ಅವಳ ಬೆರಳುಗಳನ್ನೇ ನೋಡುತ್ತಿದ್ದ.

ಅವಳು ತನ್ನ ಬೆರಳನ್ನು ನೋಡಿಕೊಂಡು ನಸುನಕ್ಕಳು. ಮನಸ್ಸು ಚೀರಿ ಚೀರಿ ಹೇಳುತ್ತಿತ್ತು. ನೀನು ಒಂದೇ ಒಂದು ಬಾರಿ ಹೇಳಿನೋಡು. ನಾನು ಈ ಕಟ್ಟುಪಾಡುಗಳ ದಾರವನ್ನು ಉಗುರಿನಿಂದ ಬಿಡಿಸಿಕೊಳ್ಳುವೆ. ಉಗುರಿನಿಂದ ಬರದಿದ್ದರೆ ಹಲ್ಲುಗಳಿಂದ ಕಚ್ಚಿ ಕಿತ್ತೆಸೆಯುವೆ.

ಆದರೆ ಅವನೂ ಸುಮ್ಮನಿದ್ದ. ಅವಳೂ ಸುಮ್ಮನೇ ನಿಂತಿದ್ದಳು. ರಸ್ತೆಗಳು ಸ್ಥಾವರದಂತೆ ಇದ್ದಲ್ಲೇ ಬಿದ್ದುಕೊಂಡೂ ಗಮ್ಯದತ್ತ ಚಲಿಸುತ್ತಿರುವಂತೆ ಅವರಿಬ್ಬರೂ ಒಂದೆಡೆ ನಿಶ್ಚಲರಾಗಿ ನಿಂತರೂ ಚಲಿಸುತ್ತಲೇ ಇದ್ದರು.

ಹೀಗೇ ಒಂದಿನ ಅವನ ಶಹರಿನಿಂದ ಹೊರಟ ಹಾದಿ ಅವಳ ಊರಿಗೆ ಬಂದು ತಲುಪಿತ್ತು. ಮತ್ತೆ ಅವಳು ಅವನ ದನಿ ಕೇಳಿ ತನ್ನ ಒಂದು ವರ್ಷದ ಮಗುವನ್ನು ಎತ್ತಿ ಹೆಗಲಮೇಲೆ ಹಾಕಿಕೊಂಡು ಬೀದಿಗೋಡಿ